ಕೆರೆ ನುಂಗಿದವರ ವಿರುದ್ಧ ಹೆಂಗಳೆಯರ ಹೋರಾಟ

ಎಚ್. ಭರತ್ ಕುಮಾರ್
ಕನ್ನಡಪ್ರಭ ವಾರ್ತೆ, ಬೆಂಗಳೂರು, ಜ.13

'ಹಳ್ಳಿಯ ಸೊತ್ತು ಹಳ್ಳಿಗೇ ಹಿಂದಿರುಗಿಸಿ....' –ಇದು ಗ್ರಾಮದ ಕೆರೆಯಂಗಳವನ್ನೇ 'ಗುಳುಂ' ಮಾಡಲು ಹೊರಟಿರುವವರ ವಿರುದ್ಧ ಹೋರಾಟ ನಡೆಸುತ್ತಿರುವ ಭೀಮನತ್ತ ಎಂಬ ಪುಟ್ಟ ಹಳ್ಳಿಯ ಮಹಿಳೆಯರ ಅಹವಾಲು.

ತಮ್ಮೂರಿನ ಜಲಾಧಾರವಾದ ಕೆರೆಗೆ ಮರು ಜೀವ ತುಂಬುವ ಕಾಯಕವನ್ನು ಸ್ವಪ್ರೇರಣೆಯಿಂದ ಭೀಮನತ್ತ ಗ್ರಾಮದ ಮಹಿಳೆಯರು ಕೈಗೆತ್ತಿಕೊಂಡಿದ್ದಾರೆ. ಅಂಥ ಪುಟ್ಟ ಸಾಧನೆಗೆ ಆಗಿರುವ ಅಡ್ಡಿಗಳನ್ನು ನಿವಾರಿಸುವಂತೆ ಸರ್ಕಾರ ಹಾಗೂ ವ್ಯವಸ್ಥೆಯನ್ನು ತಟ್ಟಿ ಎಚ್ಚರಿಸಲು ಯತ್ನಿಸುತ್ತಿದ್ದಾರೆ.

'ಇದು ನಿಜಕ್ಕೂ ಜೀವನ್ಮರಣದ ಪ್ರಶ್ನೆ. ನಮ್ಮ ಗ್ರಾಮದ ಕೆರೆಯಲ್ಲಿ ನೀರಿಲ್ಲ ಎಂದರೆ, ನಮಗೆ ಬದುಕೇ ಇಲ್ಲ. ಏಕೆಂದರೆ, ಈ ಕೆರೆಯ ಕೆಳಗಿನ ಜಮೀನಿನಲ್ಲಿಯೇ ನಮ್ಮ ಜಮೀನುಗಳು ಇರುವುದು. ಕೆರೆಯಲ್ಲಿ ನೀರಿಲ್ಲ ಎಂದಾಕ್ಷಣ, ನಮಗೆ ಬೆಳೆಯೂ ಇಲ್ಲ, ಬೆಲೆಯೂ ಇಲ್ಲ. ಇದಕ್ಕಾಗಿ ನಮ್ಮ ಗ್ರಾಮದ ಕೆರೆಯನ್ನು ನಾವೇ ಮಹಿಳೆಯರು ನಿರ್ವಹಿಸಲು ಮುಂದಾದೆವು. ಹರ ಸಾಹಸ ಮಾಡಿ, ಈಗ ಕೆರೆಗೆ ಜೀವ ತುಂಬಿದ್ದೇವೆ' ಎಂಬುದು ಗ್ರಾಮದ ಮಹಿಳೆಯರ ಒಕ್ಕೊರಲ ದನಿ.

ಅಂದಹಾಗೆ ಮುಳಬಾಗಿಲು ತಾಲೂಕಿನ ಭೀಮನತ್ತ ಬೆಂಗಳೂರಿನಿಂದ ಬರೀ 110 ಕಿಮೀ ದೂರದಲ್ಲಿದೆ. ಅಲ್ಲಿನ ಮಹಿಳೆಯರ ಕೆಚ್ಚು, ಛಲ, ಸಮುದಾಯ ಬುದ್ಧಿ ಎಂಥವರಿಗೂ ಮಾದರಿಯಾಗಬಲ್ಲಂಥದ್ದು. ಈಗ ಈ ಮಹಿಳೆಯರ ಹೋರಾಟದ ಕತೆಗೆ ಹಿನ್ನೆಲೆ ಹೀಗೆ ಮುಂದುವರಿಯುತ್ತದೆ –

'ಈ ಗ್ರಾಮದ ಕೆರೆಯನ್ನು ಪುನರುಜ್ಜೀವನ ಮಾಡಲು ಮುಂದಾದೆವು. ಇದಕ್ಕೆ ಸ್ವಯಂ ಸೇವಾ ಸಂಸ್ಥೆಯೊಂದು ನಮ್ಮ ಸ್ವಸಹಾಯ ಮಹಿಳಾ ಸಮಿತಿಯ ಮೂಲಕ ನೆರವು ನೀಡಲು ಮುಂದೆ ಬಂತು. ಇದ್ದ ಒಂದೇ ಷರತ್ತು ಎಂದರೆ, ಕೆರೆಯ ಯಾವುದೇ ಭಾಗ ಒತ್ತುವರಿಯಾಗಿರಬಾರದು ಎಂಬುದು. ಆಗಲೇ ಹೊಳೆದಿದ್ದು, ಕೆರೆ ನಮ್ಮೆಲ್ಲರ ಸ್ವತ್ತೂ ಎಂದು. ಕೆರೆ ಒತ್ತುವರಿಯಾಗಿದ್ದು ಗೊತ್ತೇ ಇತ್ತು. ಆದರೆ, ಅದು ತಪ್ಪು ಎಂಬುದು ಗೊತ್ತಿರಲಿಲ್ಲ. ಗೊತ್ತಿದ್ದರೂ ಹೇಳುವ ದನಿಯಿರಲಿಲ್ಲ.'

'ಕೂಡಲೇ, ಸಮಿತಿಯ ಸಭೆ ಸೇರಿದೆವು. ಆ ಕೆರೆ ಒತ್ತುವರಿಯಾಗಿದೆ ಎಂಬುದನ್ನು ಹೇಳಿದೆವು. ಒತ್ತುವರಿಯನ್ನು ಮೂರ್‍ನಾಲ್ಕು ಜನ ಮಾಡಿದ್ದರು. ಆ ಪೈಕಿ ಬಹುತೇಕ ಮೇಲ್ವರ್ಗಕ್ಕೆ ಸೇರಿದವರೇ ಇದ್ದರು. ಆ ಕ್ಷಣ ಎಲ್ಲರೂ ಒತ್ತುವರಿಯನ್ನು ತೆರವು ಮಾಡಲು ಕೂಡಲೇ ಒಪ್ಪಿದರು' ಎಂದು ಗ್ರಾಮಕ್ಕೆ ಭೇಟಿ ನೀಡಿದ ಈ ವರದಿಗಾರನಿಗೆ ಭೀಮನತ್ತ ಗ್ರಾಮದ ಭಾಗ್ಯಮ್ಮ ಹೇಳಲಾರಂಭಿಸಿದರು.

ಅಷ್ಟರಲ್ಲಿ ಮಧ್ಯಪ್ರವೇಶಿಸಿದ ಸೌದಾಮಣಿಯಮ್ಮ 'ಆದರೆ, ಸಮಸ್ಯೆ ಆರಂಭವಾಗಿದ್ದು ಕೆಲ ಕಾಲದ ಬಳಿಕ. ಗ್ರಾಮದಲ್ಲಾದ ಬೆಳವಣಿಗೆಯನ್ನು ತಿಳಿದ ತಾಲೂಕಿನ ಅದೇ ಕೋಮಿನ ಮುಖಂಡರು, ಈ ಗ್ರಾಮದ ಮುಖಂಡರಿಗೆ ಛೀಮಾರಿ ಹಾಕಿದ್ದರು. ನೀನೊಬ್ಬ ಹೀಗೆ ಒತ್ತುವರಿ ಮಾಡಿದ ಜಮೀನು ವಾಪಾಸು ಕೊಡುವುದು ಸರಿಯಲ್ಲ. ಅದೂ ಮಹಿಳೆಯರು, ದಲಿತ ಮಹಿಳೆಯರ ಮಾತಿಗೆ ಮಣಿಯುವುದು ನಮಗೆ ಶೋಭೆಯಲ್ಲ. ಜಮೀನು ಹಿಂದಿರುಗಿಸಿದರೆ, ನೀನು ——ಅಲ್ಲ ಎಂದು ಹೇಳಿದರು. ಅದನ್ನು ಕೇಳಿದ ಈ ಗ್ರಾಮದ ಮುಖಂಡ (ಆತನನ್ನು ಬೇಕೆಂದೇ ವರದಿಯಲ್ಲಿ ಹೆಸರಿಸಲಾಗುತ್ತಿಲ್ಲ. ಅಂಥ ಉಲ್ಲೇಖದಿಂದ ಸುಪ್ತವಾಗಿರುವ ಕೋಮು ಭಾವನೆಗಳು ಹೊರಹೊಮ್ಮೀತು ಎಂಬ ಭಾವನೆಯಿಂದ) ಭೂಮಿಯನ್ನು ಹಿಂದುರುಗಿಸಲು ಒಪ್ಪುತ್ತಲೇ ಇಲ್ಲ' ಎಂಬಲ್ಲಿ, ನೆರೆದವರ ಮಾತುಗಳಲ್ಲಿನ ನೋವು ಬೇರೆಲ್ಲಾ ರೀತಿಗಳಲ್ಲಿ ವ್ಯಕ್ತವಾಗತೊಡಗಿತು.

ಭೀಮನತ್ತದ ಈ ಕೆರೆಯ ಅಚ್ಚುಕಟ್ಟು ಒಟ್ಟು 55 ಎಕರೆಗಳು. ಈ ಕೆರೆಯನ್ನು ಆಧರಿಸಿ ಬದುಕುತ್ತಿರುವುದೆಲ್ಲಾ ಬರೀ ಬಡ ಕುಟುಂಬಗಳೇ. ಆ ಸಂಖ್ಯೆ ಸುಮಾರು 65. ಈ ಕೆರೆಯ ಮೇಲ್ಭಾಗದಲ್ಲಿ ಅಂದರೆ, ಕೆರೆಯಂಗಳದ ಪ್ರದೇಶದ ಹಿಂದೆ ಈ ಗ್ರಾಮದ ಮುಖಂಡನ ಜಮೀನೂ ಇದೆ. ಆತ ನಿಧಾನವಾಗಿ ಕೆರೆಯಂಗಳವನ್ನೇ ಒತ್ತುವರಿ ಮಾಡಿಕೊಂಡಿದ್ದಾನೆ. ಅದನ್ನು ಆ ವ್ಯಕ್ತಿ ಗ್ರಾಮದ ಎಲ್ಲರೆದುರೇ ಒಪ್ಪಿಕೊಂಡಿದ್ದಾನೆ ಸಹ. ತನ್ನ ಜಮೀನಿಗೆಂದೇ ಮತ್ತೊಂದು ತುದಿಯಲ್ಲಿ ಕೆರೆಯೊಂದನ್ನೂ ಹೊಂದಿದ್ದಾನೆ. ಈ ಕೆರೆಯ ಅಂಗಳದಲ್ಲಿರುವ ಗೋಮಾಳದ ಕಟ್ಟೆಗೂ ಪಂಪ್‌ಸೆಟ್ ಕೂಡಿಸಿ, ಇದ್ದ ಬದ್ದ ನೀರನ್ನೂ ತನ್ನ ಗದ್ದೆಗೇ ಬಳಸಿಕೊಳ್ಳುತ್ತಾನೆ ಎಂದು ಗ್ರಾಮಸ್ಥರು ದೂರಿದರು.

'ನಮಗೇನೂ ದುರುದ್ದೇಶ ಇಲ್ಲ. ಕೆರೆ ಯಾರಪ್ಪನ ಮನೆಯ ಆಸ್ತಿಯೂ ಅಲ್ಲ. ಅದು ಹಳ್ಳಿಗೆ ಸೇರಿದ್ದು ಹಳ್ಳಿಗೇ ಹಿಂದಿರುಗಿಸಿ. ಹಾಗಂತ ತಾಲೂಕು ಮಟ್ಟದ ಅಧಿಕಾರಿಗಳನ್ನು ಕೇಳಿದೆವು. ಅವರೇನೋ ಕೆರೆ ಅಳತೆ ಮಾಡಲು ಬಂದರು. ಆದರೆ, ನಮಗೆ ಆಗಿದ್ದ ಅನ್ಯಾಯ, ನೋವಿಗೆ ಪರಿಹಾರ ಕೊಡಲಿಲ್ಲ' ಎಂದು ಖೇದ ವ್ಯಕ್ತಪಡಿಸಿದರು.

'ಈ ಅಧಿಕಾರಿಗಳು ಕೆರೆಯ ಅಳತೆಯನ್ನು ಮಾಡಲು ಮೂರು ಬಾರಿ ಬಂದರು. ಮೂರು ಬಾರಿಯೂ ಬೇರೆ ಬೇರೆ ಫಲಿತಾಂಶಗಳು ಬಂದವು. ಪ್ರತಿ ಬಾರಿ ಅಳತೆ ಮಾಡಿದಾಗಲೂ ಕೆರೆಯ ವಿಸ್ತೀರ್ಣ ಕಡಿಮೆಯಾಗುತ್ತಲೇ ಬಂದಿರುವುದು ವೈಶಿಷ್ಟ್ಯ' ಎಂದು ಅಲಮೇಲಮ್ಮ ವಿವರಿಸುತ್ತಾರೆ.

'ಇದಕ್ಕೆ ಕಾರಣ ಸ್ಪಷ್ಟ. ಗ್ರಾಮದ ಮುಖಂಡರು, ಕೆರೆ ಅಳತೆ ಮಾಡಲು ಬರುವವರನ್ನು ದಾರಿ ತಪ್ಪಿಸುತ್ತಿದ್ದಾರೆ. ಅಧಿಕಾರಿಗಳೂ ಮುಖಂಡರೊಂದಿಗೆ ಶಾಮೀಲಾಗಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ, ಈ ಕೆರೆಯ ಪಕ್ಕದಲ್ಲಿರುವ ಪುಟಾಣಿ ಗುಡ್ಡವನ್ನೂ ಕೆರೆಯ ವ್ಯಾಪ್ತಿಗೆ ಸೇರಿಸಿ, ಕೆರೆಯ ವಿಸ್ತೀರ್ಣವನ್ನು ಲೆಕ್ಕ ಹಾಕುತ್ತಾರೆ' ಎಂದು ಮೋಜಣಿದಾರರ 'ಪವಾಡ'ವನ್ನು ಬಯಲಿಗೆಳೆದರು.

'ಈ ಗ್ರಾಮದ ಸೊಸೆ ನಾನು. ಕಳೆದ 40ಕ್ಕೂ ಹೆಚ್ಚು ವರ್ಷದಿಂದ ಇಲ್ಲಿದ್ದೇನೆ. ಮೊದಲಿದ್ದ ಕೆರೆಯಂಗಳಕ್ಕೂ ಈಗಿರುವುದಕ್ಕೂ ಅಪಾರವಾದ ವ್ಯತ್ಯಾಸವಾಗಿದೆ. ಕೆರೆಯಂಗಳದ ಜಾಗ ಕಡಿಮೆಯಾಗುತ್ತಿದ್ದರೆ, ಅದೇ ಪ್ರಮಾಣದಲ್ಲಿ ಮತ್ತೊಂದು ಕಡೆಗೆ ಹಸಿರಿನ ಒತ್ತುವರಿಯಾಗುತ್ತಲೇ ಇದೆ' ಎಂದು ಅಲಮೇಲಮ್ಮ ಹೇಳುತ್ತಾರೆ. ಈ ಮಾತುಗಳನ್ನು ಗ್ರಾಮಸ್ಥರು ಸಮರ್ಥಿಸುತ್ತಾರೆ.

'ಈ ಕುರಿತು ಆಗುತ್ತಿರುವ ತಪ್ಪನ್ನು ಸರಿಪಡಿಸಿ ಎಂದು ತಹಶೀಲ್ದಾರ್ ಅವರನ್ನು ಕೇಳಿದರೆ, ಅವರು ಒಪ್ಪುತ್ತಿಲ್ಲ. ಮಾತನಾಡಿದರೆ, ಕತ್ತು ಹಿಡಿದು ತಳ್ಳುವುದಾಗಿ ಬೆದರಿಕೆ ಹಾಕುತ್ತಾರೆ. ಈ ಪ್ರಕರಣ ಕೈ ಬಿಡಿ, ಇಲ್ಲವಾದಲ್ಲಿ, ನಿಮಗೆ ಏನೂ ದಕ್ಕದ ಹಾಗೆ ಮಾಡ್ತೀವಿ ಎಂದು ಅಧಿಕಾರಿಗಳು ಬೆದರಿಕೆಯೊಡ್ಡುತ್ತಾರೆ. ಈಗ ಕೆರೆಯ ಪ್ರದೇಶ ಎಷ್ಟು ಎಂಬುದರ ಮಾಹಿತಿಯನ್ನೂ ನೀಡಲು ಅಧಿಕಾರಿಗಳು ಹಿಂದೆ ಮುಂದೆ ನೋಡುತ್ತಿದ್ದಾರೆ' ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದರು.

'ನಮ್ಮ ಪ್ರಕಾರ, ಈ ಕೆರೆಯ ಪ್ರದೇಶ 18 ಎಕರೆ. ಆದರೆ, ಈಗಿರುವುದು ಬರೀ 10 ಎಕರೆ ಮಾತ್ರ. ಸತ್ಯ ಹೇಳಿದರೆ, ಒತ್ತುವರಿಯನ್ನು ಎಲ್ಲಿ ತೆರವು ಮಾಡಬೇಕಾದೀತೋ ಎಂಬ ಆತಂಕ ಅವರದು. ಅಲ್ಲದೇ, ಗ್ರಾಮದ ಮುಖಂಡ ಪ್ರಭಾವಿ ಬೇರೆ. ಹೀಗಾಗಿ ಕೋಲಾರದ ಪ್ರಭಾವಿ ರಾಜಕಾರಣಿಯೊಬ್ಬರ ವಶೀಲಿಯಿಂದ ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸುತ್ತಿದ್ದಾನೆ' ಎಂದು ಆರೋಪಿಸಿದರು.

'ಈ ಗ್ರಾಮದಲ್ಲಿನ ಎಲ್ಲ ಜಮೀನನ್ನೂ ಒತ್ತುವರಿ ಮಾಡಲಾಗಿದೆ. ಅಷ್ಟೇ ಅಲ್ಲ, ಸ್ಮಶಾನವನ್ನೂ ಒತ್ತುವರಿ ಮಾಡಲಾಗಿದೆ. ನಮ್ಮೂರಿನಲ್ಲಿ ಸತ್ತವರನ್ನು ನಮ್ಮ ಹೊಲಗಳಲ್ಲೇ ಹೂಳಬೇಕು. ಇಲ್ಲವಾದಲ್ಲಿ, ಬೇರೆಯವರ ಜಮೀನಿನಲ್ಲಿ ಹೂಳಬೇಕು' ಎಂದು ನಿವೃತ್ತ ಪೊಲೀಸ್ ಪೇದೆ ರಾಮಣ್ಣ ಗಮನ ಸೆಳೆಯುತ್ತಾರೆ.

'ನಾವು ಖಂಡಿತವಾಗಿಯೂ ಯಾರ ವಿರುದ್ಧವೂ ಇಲ್ಲ. ನಮ್ಮ ಕೆರೆಯ ವಿಸ್ತೀರ್ಣ ಎಷ್ಟು ಎಂಬ ಮಾಹಿತಿ ನೀಡಿ. ಕೆರೆಯ ಅಂಗಳ ಎಷ್ಟಿದೆ ಅಷ್ಟನ್ನು ಮಾತ್ರ ಕೊಡಿಸಿ, ಯಾರಿಂದಲೂ ಹೆಚ್ಚಿನದು ಬೇಕಾಗಿಲ್ಲ. ಇರುವುದನ್ನೇ ಚೊಕ್ಕಟವಾಗಿಇಟ್ಟುಕೊಳ್ಳುವ ಯತ್ನಕ್ಕೆ ಸಹಕರಿಸಿ' ಎಂಬುದು ಗ್ರಾಮಸ್ಥರ ಒಕ್ಕೊರಲ ಮನವಿ.

ಸಬಲೀಕರಣದ ಮಂತ್ರ ಹಾಡುವ, ಕೆರೆಗಳಿಗಾಗಿ ಸಾವಿರಾರು ಕೋಟಿ ರುಪಾಯಿ ಸುರಿಯುವ ಸರ್ಕಾರ ಹಾಗೂ ಸಮಾಜಗಳು ಭೀಮನತ್ತ ಮಹಿಳೆಯರ ನೆರವಿಗೆ ಬರಬೇಕಿದೆ. 'ಹಳ್ಳಿಯ ಸ್ವತ್ತನ್ನು ಹಳ್ಳಿಗೇ ಹಿಂದಿರುಗಿಸಿ' ಎಂಬ ಅವರ ದನಿಗೆ, ಸಮಾಜದ್ದೂ ಧ್ವನಿ ಸೇರಿಸಬೇಕಾಗಿದೆ. ಆದರೆ, ಸಮಾಜ –ಸರ್ಕಾರಗಳಿಗೆ ಧ್ವನಿ, ದೃಷ್ಟಿ ಇದೆ ಎಂಬುದು ಸಾಬೀತಾಗಬೇಕಿದೆ.

ಮಣಿಯದ ಮಹಿಳಾಮಣಿಗಳು

ಬೆಂಗಳೂರು: ಸಾಮಾಜಿಕ ಬದಲಾವಣೆಗಳು ಶೀಘ್ರವಾಗಿ ಜಾರಿಯಾಗಬೇಕಾದರೆ, ಹಲವಾರು ಮಾದರಿಯ ಹೋರಾಟ ತಂತ್ರಗಳ ಬಳಕೆ ಅನಿವಾರ್ಯ. ಭೀಮನತ್ತ ಮಹಿಳೆಯರು ಅನುಸರಿಸಿದ ವಿಧಾನಗಳಿವು.

ಅಧಿಕಾರಿಗಳು – ಗ್ರಾಮದ ಮಹಿಳೆಯರಿಗೂ ಸಂಬಂಧಿಸಿದಂತೆ ನಡೆದ ಸ್ವಾರಸ್ಯಕರ ಘಟನೆಯೊಂದನ್ನು ಗ್ರಾಮಸ್ಥರು ನೆನಪಿಸಿಕೊಳ್ಳುತ್ತಾರೆ.

"ಅದೊಂದು ಬಾರಿ ಗ್ರಾಮದ ಕೊಳವೆ ಬಾವಿ ಕೆಟ್ಟಿತ್ತು. ತಾಲೂಕು ಕೇಂದ್ರವಾದ ಮುಳಬಾಗಿಲು ಕಚೇರಿಗಳಿಗೆ ನಾಲ್ಕಾರು ಬಾರಿ ದೂರು ಬರೆದರೂ, ಯಾವುದೇ ಪ್ರಯೋಜನವಾಗಲಿಲ್ಲ. ಒಂದು ದಿನ ಬೆಳ್ಳಂಬೆಳಗ್ಗೆ ಕ್ರುದ್ಧ ಮಹಿಳೆಯರ ಗುಂಪು ಮುಳಬಾಗಿಲಿನ ಕಚೇರಿ ಮುಂದೆ ಬೀಡು ಬಿಟ್ಟಿತು. ಈ ಧರಣಿಗೆ ಕಾಲೇಜು ಹುಡುಗರೂ ಬೆಂಬಲಿಸಲು ಮುಂದಾದರು. ಪೊಲೀಸರೂ ಸೇರಿದಂತೆ ಎಲ್ಲರೂ ಬಂದು ನೆರೆದರು. ಕೊಳವೆ ಬಾವಿ ದುರಸ್ತಿ ಮಾಡಿಸಬೇಕಿದ್ದ ಅಧಿಕಾರಿಯೂ ಬಂದಿಳಿದರು. ಮಹಿಳೆಯರ ಮನವೊಲಿಸಲು ಏನೇನೋ ಸಬೂಬು ಹೇಳಲಾಯಿತು. ಕೊನೆಗೆ, ತತ್‌ಕ್ಷಣ ದುರಸ್ತಿ ಮಾಡಿಸಲು ಕಳುಹಿಸುವುದಾಗಿಯೂ, ಮಹಿಳೆಯರೂ ಗ್ರಾಮಕ್ಕೆ ಮರಳಬೇಕು ಎಂದು ಕೇಳಿಕೊಂಡರು. ಆದರೆ, ಮಹಿಳೆಯರು ಮಣಿಯಲಿಲ್ಲ. ದುರಸ್ತಿಯಾಗಿದೆ ಎಂಬುದು ಖಾತ್ರಿಯಾಗದ ಹೊರತು ಕದಲುವುದಿಲ್ಲ ಎಂದು ಪಟ್ಟು ಹಿಡಿದರು. ಪ್ರತ್ಯಕ್ಷ ವರದಿ ತರಲು ದುರಸ್ತಿ ತಂತ್ರಜ್ಞರೊಂದಿಗೆ ಇಬ್ಬರು ಪ್ರತಿನಿಧಿಗಳನ್ನೂ ಕಳುಹಿಸಲಾಯಿತು. ಅಲ್ಲಿಗೆ ಎಲ್ಲ ಮುಗಿಯಿತು ಎಂದು ಅಧಿಕಾರಿ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಅಷ್ಟರಲ್ಲಿ, 'ನೀವು ಸರಿಯಾಗಿ ಕೆಲಸ ಮಾಡಿಲ್ಲ ಅಂತ ಹೇಳಲು ಅಷ್ಟು ದೂರದಿಂದ ಬಂದಿದ್ದೀವಿ. ಬೆಳಗಿನಿಂದ ಏನೂ ತಿಂದಿಲ್ಲ, ಮೊದಲು ತಿಂಡಿ ತರಿಸಿ' ಎಂದು ದಬಾಯಿಸಿದರು. ಹಣ ಕೊಡೊದಿಲ್ಲ ಏನ್ಮಾಡ್ತೀರಿ ಎಂಬ ಮರುದಬಾವಣೆ ಅಧಿಕಾರಿಯಿಂದ. 'ಹಣ ಕೊಡದಿದ್ದರೆ, ಜೇಬಿಗೆ ಕೈ ಹಾಕಿ ಹಣ ತಗೋತೇವೆ. ನಿಮ್ಮ ತಪ್ಪನ್ನು ಹೇಳಕ್ಕೇ ಇಲ್ಲಿಗೆ ಬಂದಿರೋದು' ಎಂದು ಮಹಿಳೆಯರು ಸ್ಪಷ್ಟಪಡಿಸಿದರು. ಕೊನೆಗೆ ನೆರೆದ ಮಹಿಳೆಯರಿಗೆ ತಿಂಡಿ ಕೊಡಿಸಿದರು. ಮತ್ತೆಲ್ಲಿ ಮಧ್ಯಾಹ್ನದ ಊಟಕ್ಕೆ ಬೇಡಿಕೆ ಬರುವ ಮುನ್ನವೇ, ನೆರೆದವರೊಂದಿಗೆ ತಾನೂ ಗ್ರಾಮಕ್ಕೆ ತೆರಳಿ ಕೊಳವೆ ಬಾವಿ ದುರಸ್ತಿ ಮಾಡಿಕೊಟ್ಟರು. ಅಂದಿನಿಂದ ಈ ಗ್ರಾಮದ ಯಾವುದೇ ದೂರಿಗೂ ತತ್‌ಕ್ಷಣದ ಸ್ಪಂದನೆ ಇದ್ದೇ ಇರುತ್ತವೆ."

'ಮತ್ತೊಂದು ಬಾರಿ, ಕೋಲಾರ ಜಿಲ್ಲಾ ಪಂಚಾಯಿತಿಯ ಸಾಮಾನ್ಯ ಸಭೆ ನಡೆಯುವ ಸಭಾಂಗಣಕ್ಕೆ ಈ ಮಹಿಳೆಯರು ಬೀಗ ಹಾಕಿ ಪ್ರತಿಭಟಿಸಿದ್ದರು. ತಮ್ಮ ಗ್ರಾಮಕ್ಕೆ ನೀಡಲಾಗಿದ್ದ ಭರವಸೆಯನ್ನು ಈಡೇರಿಸದಿದ್ದನ್ನು ವಿರೋಧಿಸಿ ಆ ಪ್ರತಿಭಟನೆ ಮಾಡಿದ್ದರು. ಆ ಸಂದರ್ಭದಲ್ಲಿ ಸಂಸದರು, ಸಚಿವರು, ಜಿಲ್ಲಾ ಪಂಚಾಯತ್ ಸದಸ್ಯರೆಲ್ಲರೂ ಬಹುಕಾಲ ಸಭಾಂಗಣದ ಹೊರಗೇ ನಿಂತು ಮಹಿಳೆಯರ ಆಕ್ರೋಶ ಎದುರಿಸಬೇಕಾಯಿತು. ಕೊನೆಗೆ ಸಂಸದರೇ ತಮ್ಮ ನಿಧಿಯಿಂದ ಹಣ ಮಂಜೂರು ಮಾಡಿ ಜಿಲ್ಲಾಧಿಕಾರಿಗಳಿಗೆ ಸ್ಥಳದಲ್ಲೇ ಬರೆದ ಪತ್ರದ ಪ್ರತಿಯನ್ನು ನೀಡಿದಾಗಲೇ ಎಲ್ಲ ತಣ್ಣಗಾಗಿದ್ದು' ಎಂದು ಹಿರಿಯ ಅಧಿಕಾರಿಯೊಬ್ಬರು ಸ್ಮರಿಸುತ್ತಾರೆ.

ಕನ್ನಡಪ್ರಭ

ಬೆಂಗಳೂರು
13, ಜನವರಿ, 2003
ಸೋಮವಾರ
14 ಪುಟ, ರು. 2-00
★ City



ಗುವಾಹಟಿ: ಖಾಜಿರಂಗ ನ್ಯಾಷನಲ್ ಪಾರ್ಕ್‌ನಲ್ಲಿ ಭಾನುವಾರ ವಿಶೇಷ ಗಜಮೇಳ. ಆಕರ್ಷಕ ಧಿರಿಸು ತೊಟ್ಟಿದ್ದ ಆನೆ ಮರಿ ಬಂದಿದ್ದ ಜನರ ಮನ ಸೂರೆಗೊಂಡಿತು.



ಅಹಮದಾಬಾದ್: ಶನಿವಾರ ರಾತ್ರಿ ಖ್ಯಾತ ಸರೋದ್ ವಾದಕ ಉಸ್ತಾದ್ ಅಮ್ಜದ್ ಅಲಿ ಖಾನ್ ಅವರ ಸಂಗೀತ ಕಾರ್ಯಕ್ರಮ ಏರ್ಪಾಡಾಗಿತ್ತು. ಕಛೇರಿಯ ಒಂದು ರಸಘಟ್ಟದಲ್ಲಿ ಮೈಮರೆತಿರುವ ಉಸ್ತಾದ್.



ಮೆಲ್ಬೋರ್ನ್: ಆಸ್ಟ್ರೇಲಿಯಾ ಮುಕ್ತ ಟೆನಿಸ್ ಟೂರ್ನಿಯಲ್ಲಿ ಒಂದು ವರ್ಷದ ಮಗ ಗಿಲ್‌ಜತೆ ಪತಿ ಆಂಡ್ರೆ ಅಗಾಸ್ಸಿ ಆಟವನ್ನು ಸವಿಯುತ್ತಿರುವ ಮಾಜಿ ಟೆನಿಸ್ ತಾರೆ ಸ್ಟೆಫಿಗ್ರಾಫ್.

ಕೆರೆಯ ಕಾಯಕದಿಂದ ಸಬಲೆಯರಾದ ಅಬಲೆಯರು

ಎಚ್. ಭರತ್ ಕುಮಾರ್
ಬೆಂಗಳೂರು, ಜ.12

ಈಗ ಪಾತ್ರಗಳು ಬದಲಾಗಿವೆ! ಬೇಡಿದ 'ಕೈ'ಗಳು ನೀಡುತ್ತಿವೆ; ನೀಡಿದ್ದ 'ಕೈ'ಗಳು ಪಡೆಯುತ್ತಿವೆ. ಬೇಡಿದ– ನೀಡಿದ 'ಕೈ'ಗಳು ಗ್ರಾಮದ ಏಳಿಗೆಗಾಗಿ ಜೊತೆಯಾಗಿ ದುಡಿಯುತ್ತಿವೆ.

ಈಗ ನೀಡುವ ದೃಢತೆ ಬಂದಿರುವುದು ಬರೀ ದುಡಿಯುವ 'ಕೈ'ಗಳಿಗಷ್ಟೇ ಅಲ್ಲ, ಅಬಲೆಯರ ಕೈಗಳಿಗೂ. ಶತ ಶತಮಾನಗಳ ಕಾಲ ಶೋಷಣೆಗೆ ತುತ್ತಾದ ಮೈ–ಮನಸ್ಸುಗಳು ಈಗ ನಿರಾಳವಾಗಿವೆ. ದೂರದ ನಗರಗಳ ಪಂಚತಾರಾ ಹೋಟೆಲುಗಳ ಹವಾನಿಯಂತ್ರಿತ ಸಭಾಂಗಣಗಳಲ್ಲಿ ಚರ್ವಿತ ಚರ್ವಣವಾಗಿರುವ 'ಮಹಿಳಾ ಸಬಲೀಕರಣ', ಕೋಲಾರ ಜಿಲ್ಲೆಯ 16 ಹಳ್ಳಿಗಳಲ್ಲಿ ಸದ್ದಿಲ್ಲದೇ ಸಾಕಾರಗೊಂಡಿದೆ. ಅದೂ ಸರ್ಕಾರದ ಹಸ್ತಕ್ಷೇಪವಿಲ್ಲದೇ.

ಕೋಲಾರ ಜಿಲ್ಲೆಯ ಈ ಹಳ್ಳಿಗಳಲ್ಲಿ ಬರೀ ಪಾತ್ರಗಳಷ್ಟೇ ಅಲ್ಲ, ಅವಕ್ಕೆ ಅನುಗುಣವಾಗಿ ಸಾಮಾಜಿಕ ಸನ್ನಿವೇಶಗಳೂ ಬದಲಾಗುತ್ತಿವೆ. ಈ ಹೊಸ ಪ್ರಯೋಗಶಾಲೆಯನ್ನು ಕಾಣಬೇಕೆಂದರೆ, ಬೆಂಗಳೂರಿನಿಂದ ಬರೀ 110 ಕಿಮೀ ದೂರದ ಗ್ರಾಮಗಳಿಗೆ ಹೋದರೆ ಸಾಕು.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ 16 ಹಳ್ಳಿಗಳಲ್ಲಿ ಸಾಮಾಜಿಕ ಸನ್ನಿವೇಶ ಬದಲಾಗುತ್ತಿದೆ. ಬದಲಾವಣೆಯ ಗಾಳಿ ಬೀಸಿದೆ. ಸಾಮಾಜಿಕ ವ್ಯವಸ್ಥೆಯ ಚಕ್ರ ಒಂದು ಸುತ್ತು ಪೂರೈಸಿದೆ.

ಅಂದು ದಿನದ ಕೂಲಿಯ ಕಾಸಿಗೆ ಕೈಯೊಡ್ಡುತ್ತಿದ್ದ ಕೈಗಳೇ ಈಗ ಸಾವಿರಾರು ರುಪಾಯಿ ಎಣಿಸುತ್ತಿವೆ. ವಿಪರ್ಯಾಸವೆಂದರೆ, ಅಂದು ಬೇಕೆನಿಸಿದಾಗ ಕೂಲಿ ನೀಡುತ್ತಿದ್ದ ದರ್ಪದ 'ಧಣಿ', ತನ್ನ ಮಾಜಿ ಮಹಿಳಾ ಕೂಲಿಯಾಳುಗಳಿಂದ ಹಣ ಪಡೆಯುತ್ತಾನೆ. ಮತ್ತೊಂದು ವೈಶಿಷ್ಟ್ಯ ಎಂದರೆ, ಈ ಮಹಿಳೆಯರಲ್ಲಿ ಬಹುತೇಕರು ದಲಿತರು, ಉಳಿದವರು ಹಿಂದುಳಿದ ವರ್ಗಕ್ಕೆ ಸೇರಿದವರು. ಈ ಎಲ್ಲರೂ ಎಲ್ಲ ಅರ್ಥಗಳಲ್ಲಿಯೂ ಶೋಷಿತರೇ.

ಮಹಿಳಾ ಸ್ವಸಹಾಯ ಸಮಿತಿಗಳ ಯಶೋಗಾಥೆ



ಈ ಗ್ರಾಮಗಳ ಸಾಮಾಜಿಕ ಚಿತ್ರಣವೂ ಬದಲಾಗುತ್ತಿದೆ. ಈ ಗ್ರಾಮಗಳಲ್ಲಿ ಮಹಿಳೆಯರು ಬರೀ ಹೆರುವ ಯಂತ್ರಗಳೂ ಅಲ್ಲ ಅಥವಾ ಅವರ ಪಾತ್ರ ಅಡುಗೆಮನೆಗೆ ಮಾತ್ರ ಸೀಮಿತವಾಗಿಲ್ಲ. ಈಗ ಗ್ರಾಮದ ಚಟುವಟಿಕೆಗಳ ಚುಕ್ಕಾಣಿಯನ್ನು ಮಹಿಳೆಯರೇ ಕೈವಶಪಡಿಸಿಕೊಂಡಿದ್ದಾರೆ. ಗ್ರಾಮದಲ್ಲಿ ಹಾಲು ಒಕ್ಕೂಟ ನಡೆಸುವುದರಿಂದ ಹಿಡಿದು ಕೆರೆಯ ಏರಿಯನ್ನು ಗಟ್ಟಿಗೊಳಿಸುವವರೆಗೆ ಪ್ರತಿಯೊಂದನ್ನೂ ಇಲ್ಲಿ ಮಹಿಳೆಯರೇ ಕೈಗೆತ್ತಿಕೊಂಡಿದ್ದಾರೆ; ಅಂಥ ಹದಿನಾರು ಹಳ್ಳಿಗಳ ಪೈಕಿ ಒಂದು ಹಳ್ಳಿ –ಮುಳಬಾಗಿಲು ತಾಲೂಕಿನ ಭೀಮನತ್ತ.

ಮನೆಯಿಂದ ಹೊರ ಬಂದು ಗ್ರಾಮೋದ್ಧಾರದಲ್ಲಿ ಭಾಗಿಯಾಗಿರುವುದು ಗಂಗಾ ಮಹಿಳಾ ಸ್ವ ಸಹಾಯ ಸಮಿತಿ ಹಾಗೂ ನಯನ ಮಹಿಳಾ ಸ್ವಸಹಾಯ ಸಮಿತಿ ಹೆಸರಿನಲ್ಲಿ. ಈ ಯಶೋಗಾಥೆಯನ್ನು ಭೀಮನತ್ತ ಗ್ರಾಮದ ಮಹಿಳೆಯರು 'ಕನ್ನಡಪ್ರಭ'ದೊಂದಿಗೆ ಹಂಚಿಕೊಂಡರು.

'ಬಹುತೇಕ ಗ್ರಾಮಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಪಾತ್ರ ಬರೀ ಅಂಗನವಾಡಿ/ ಬಾಲವಾಡಿ, ರಾತ್ರಿ ಶಾಲೆ ನಡೆಸುವುದು, ಗ್ರಾಮದ ಸ್ವಚ್ಛತೆ ನಿರ್ವಹಿಸುವುದಕ್ಕಷ್ಟೇ ಸೀಮಿತವಾಗಿತ್ತು. ಆದರೆ, ನಮ್ಮ ಊರಿನಲ್ಲಿ ಮತ್ತಷ್ಟು ಒಳ್ಳೇ ಕಾರ್ಯಕ್ರಮ ಹಾಕಿಕೊಳ್ಳಬೇಕು ಅಂತ ತೀರ್ಮಾನ ಮಾಡಿದೆವು. ಅದಕ್ಕಾಗಿ ಹಾಲು ಉತ್ಪಾದಕರ ಮಹಿಳಾ ಸೊಸೈಟಿಗೆ ಚಾಲನೆ ನೀಡಿದೆವು. ಆ ಬಳಿಕ ಗ್ರಾಮದ ಜಲಾಧಾರ ಎನಿಸಿದ ಕೆಳಗಿನ ಕೆರೆಯನ್ನೂ ನಮ್ಮ ಚಟುವಟಿಕೆಯ ಕೇಂದ್ರ ಮಾಡಿಕೊಳ್ಳಬಹುದು ಎನ್ನಿಸಿತು. ಹೀಗಾಗಿ ಕೆರೆ ನಿರ್ವಹಣೆ ಕಾರ್ಯಕ್ರಮವನ್ನು ನಾವು ಹಾಕಿಕೊಂಡೆವು. ಈಗ ನಮ್ಮ ಸಮಿತಿಗಳು ಕೆರೆ ನಿರ್ವಹಣೆ, ಹಾಲಿನ ಸೊಸೈಟಿ, ಮಹಿಳೆಯರಲ್ಲಿ ಸಣ್ಣ ಉಳಿತಾಯ, ಬಾಲವಾಡಿ ಹಾಗೂ ರಾತ್ರಿ ಶಾಲೆ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ' ಎಂದು ಲಕ್ಷ್ಮಮ್ಮ ಹೇಳಿದರು.

➤ 5ನೇ ಪುಟ ನೋಡಿ

ಕೆರೆಯ ಕಾಯಕದಿಂದ ಸಬಲೆಯರಾದ ಅಬಲೆಯರು

➤ ಮೊದಲ ಪುಟದಿಂದ

■ **ನೀರಿದ್ದಾಗಲೂ ಕೆರೆ; ಇಲ್ಲದಾಗಲೂ...:** ಇಲ್ಲಿಯ ಜನರಿಗೆ ಕೆರೆ ಬರೀ ನೀರಿದ್ದಾಗಲಷ್ಟೇ ಆಧಾರವಲ್ಲ. ನೀರಿನ ಸಂಗ್ರಹ ಇಲ್ಲದಾಗಲೂ ಈ ಗ್ರಾಮಸ್ಥರಿಗೆ ಕೆರೆ ಅನ್ನ ನೀಡುತ್ತದೆ. ಅದನ್ನು ಸೌದಾಮಣಿಯಮ್ಮ ಹೇಳುವುದು ಹೀಗೆ. 'ಕೆರೆಯಲ್ಲಿ ನೀರಿತ್ತು ಅಂದ್ರೆ ನಾವು ಬೆಳಕೊಂತೀವಿ. ಇಲ್ಲ ಅಂದ್ರೆ, ನಾವೇ ಈ ಕೆರೆ ಕಾಮಗಾರಿಗಾಗಿ ಸಮಿತಿ ಮೂಲಕ ಕೂಲಿ ಮಾಡಿ ದುಡ್ಡು ದುಡಿತೀವಿ. ಕೆರೆಯಲ್ಲಿ ಹೂಳು ಎತ್ತುವುದು, ಕೆರೆಯ ಏರಿಗೆ ಮಣ್ಣು ಹಾಕಿ ಬಲಪಡಿಸುವುದು, ಕಾಲುವೆ ಸರಿ ಮಾಡುವುದು ಎಲ್ಲವನ್ನೂ ಸಮಿತಿಯ ಮೂಲಕ ಮಾಡ್ತೇವೆ. ಇದರಿಂದ ಕೂಲಿ ದೊರಕುತ್ತದೆ. ಮುಂದಿನ ಮಳೆಗಾಲದಲ್ಲಿ ಕೆರೆಯಲ್ಲಿ ನೀರಿನ ಸಂಗ್ರಹ ಹೆಚ್ಚುತ್ತದೆ.'

ಬೇಸಿಗೆಯಲ್ಲಿ ಬೆಳೆ ಇರುವುದಿಲ್ಲ. ಕೈ ಖಾಲಿ. ಆಗ ಕೆರೆಯ ಕೆಲಸ ಕೈಗೆತ್ತಿಕೊಳ್ಳುತ್ತೇವೆ. ಕೆರೆಯ ಹೂಳನ್ನು ತೆಗೆದು, ಬೇರೆಯವರ ಹೊಲ, ಗದ್ದೆ ಹಾಗೂ ತೋಟಗಳಿಗೆ ಹಾಕುತ್ತೇವೆ. ಕುಟುಂಬ ಪೂರ್ತಿ ಕೆರೆ ಹೂಳೆತ್ತಲು ಬರುತ್ತಾರೆ. ಊರಿನ ದೊಡ್ಡ ಕುಳಗಳೂ ಈ ಕೆಲಸಕ್ಕ ಕೈ ಜೋಡಿಸುತ್ತಿವೆ. ಕೆರೆಯಂಗಳದಿಂದ ಎತ್ತಿದ ಹೂಳು ಸಾಗಿಸಲು ಗ್ರಾಮದವರದೇ ಟ್ರ್ಯಾಕ್ಟರ್‌ಗಳನ್ನು ಬಳಸಲಾಗುತ್ತದೆ. ಇದಕ್ಕೆ ದಿನವೊಂದಕ್ಕೆ 800 ರು. ಬಾಡಿಗೆಯನ್ನೂ ನೀಡಲಾಗುತ್ತದೆ' ಎಂದು ಸ್ವಸಹಾಯ ಸಂಘದ ಭಾಗ್ಯಮ್ಮ ವಿವರಿಸುತ್ತಾರೆ.

'ಇಂಥ ಚಟುವಟಿಕೆಯಿಂದ ಗ್ರಾಮಸ್ಥರಿಗೆ ಉದ್ಯೋಗ ಎಲ್ಲ ಋತುಗಳಲ್ಲಿಯೂ ದೊರಕಿದಂತಾಯಿತು. ನಮ್ಮ ಮೂಲಭೂತ ತತ್ವ ಎಂದರೆ, ನಾವು ಕೇವಲ ಮಾರ್ಗದರ್ಶನವನ್ನಷ್ಟೇ ನೀಡುತ್ತೇವೆ. ಮಿಕ್ಕಿದ್ದನ್ನೆಲ್ಲಾ ಮಾಡಿಕೊಳ್ಳಬೇಕಿರುವುದು ಇಲ್ಲಿಯ ಮಹಿಳೆಯರೇ. ತಮಗೆ ಒಳ್ಳೆಯದು ಯಾವುದು ಕೆಟ್ಟದ್ದು ಯಾವುದು ಎಂಬುದನ್ನು ಗುರುತಿಸಿ ನಿರ್ಣಯ ಕೈಗೊಳ್ಳುವ ಶಕ್ತಿ ಅವರಿಗೆ ದೊರಕುವಂತೆ ಮಾಡಬೇಕು. ಅಷ್ಟನ್ನು ನಾವು ಕಲಿಸಿದರೆ, ಸಾಕು ತಮ್ಮ ಸಮಸ್ಯೆಯನ್ನು ತಾವೇ ಬಗೆ ಹರಿಸಿಕೊಳ್ಳುತ್ತಾರೆ. ಹೀಗಾಗಿ ಯಾವುದನ್ನೇ ಆಗಲಿ –ಹೊರಗಿನ ವ್ಯವಸ್ಥೆಯಿಂದ– ಅವರ ಮೇಲೆ ಹೇರುವುದು ತಪ್ಪು.' ಎಂದು ಈ ಸಮಿತಿಗಳನ್ನು ಪ್ರಾಯೋಜಿಸಿರುವ ಗ್ರಾಮ ವಿಕಾಸದ ಮುಖ್ಯಸ್ಥ ಎಂ.ವಿ.ಎನ್.ರಾವ್ ವಿವರಿಸುತ್ತಾರೆ.



■ **ಎಲ್ಲರೂ ಒಂದೇ:** 'ಇಲ್ಲಿ ಯಾರೂ ದೊಡ್ಡವರಲ್ಲ, ಸಣ್ಣವರೂ ಅಲ್ಲ. ಅದಕ್ಕಾಗಿ ನಾವು ಎಲ್ಲರಿಗೂ ಒಂದೇ ಬಗೆಯ ಕೂಲಿ ನೀಡ್ತೇವೆ. ಗಂಡಸೇ ಇರಲಿ, ಹೆಂಗಸೇ ಇರಲಿ ಎಲ್ಲರಿಗೂ ತಲಾ 40 ರು. ಇದನ್ನು ವಾರಕ್ಕೊಮ್ಮೆ ಸಂಘ ಬಟವಾಡೆ ಮಾಡುತ್ತದೆ. ಇನ್ನು ಟ್ರ್ಯಾಕ್ಟರ್ ಮಾಲೀಕರಿಗೂ ಅದೇ ಸಂದರ್ಭದಲ್ಲಿ ಹ ಬಡವಾಡೆ ನೀಡಲಾಗುತ್ತದೆ. ಈ ಹಣವನ್ನು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳೇ ವಿತರಿಸುತ್ತಾರೆ' ಎಂದು ವಿವರಿಸಿದರು.

'ನಾವೆಲ್ಲ ಗ್ರಾಮದ ಮುಖಂಡರ ಗದ್ದೆಯಲ್ಲಿಯೇ ಕೂಲಿಗೆ ಹೋಗ್ತಿದ್ದವು. ಈಗ ಅವರೇ ನಮ್ಮೊಂದಿಗೆ ಸಾಲಿನಲ್ಲಿ ನಿಂತು, ಅವರ ಟ್ರ್ಯಾಕ್ಟರ್ ಮಾಡಿದ ಕೆಲಸಕ್ಕೆ ಹಣ ಪಡೆಯುತ್ತಾರೆ. ಮೊದಲು ಸವರ್ಣೀಯ ಗಂಡಸರು ಸಾಲಲ್ಲಿ ನಿಂತು, ಮಹಿಳೆಯರಿಂದ ಅದರಲ್ಲೂ ದಲಿತ ಮಹಿಳೆಯರಿಂದ ಕೂಲಿಗೆ ಕೈಯೊಡ್ಡುವುದು ಸಹಿಸದ ಸಂಗತಿಯಾಗಿತ್ತು. ಅದಕ್ಕಾಗಿಯೇ ಅವರು ಹಣವನ್ನು ಪಡೆಯುವಂತೆ ತಮ್ಮ ಟ್ರ್ಯಾಕ್ಟರ್ ಡ್ರೈವರ್‌ನ ಕಳುಹಿಸಿದರು. ಆದರೆ, ನಾವು ನಿರಾಕರಿಸಿದೆವು. ಟ್ರ್ಯಾಕ್ಟರಿನ ಮಾಲೀಕರಿಗೇ ಹಣ ಕೊಡ್ತೇವೆ, ಚಾಲಕರಿಗೆ ಅಲ್ಲ ಎಂಬ ಬಿಗಿ ನಿಲುವು ತಳೆದೆವು. ಒಂದೆರಡು ವಾರ ಯಾರನ್ನೂ ಕಳುಹಿಸಲಿಲ್ಲ. ಆ ನಂತರ ಅವರಾಗಿಯೇ ಬಂದರು. ಈಗ ಎಲ್ಲ ಸುಗಮವಾಗಿದೆ' ಎಂದು ಸಂಘದ ಮತ್ತೊಬ್ಬ ಸದಸ್ಯೆ ಸೌದಾಮಣಿಯಮ್ಮ ಹೇಳುತ್ತಾರೆ.

'ವಾರಕ್ಕೆ ಎಷ್ಟು ಹೂಳಿಗೆ ಬೇಡಿಕೆ ಇದೆ ಎಂಬುದರ ಮೇಲೆ, ಎಷ್ಟು ಜನರಿಗೆ ಕೂಲಿ ನೀಡಬೇಕು ಎಂಬುದನ್ನು ನಿರ್ಧರಿಸುತ್ತೇವೆ. ಸದ್ಯ ನಾವೀಗ ಕೆರೆ ಹೂಳೆತ್ತಿ, ಕೆರೆ ಏರಿಯನ್ನು ಬಲಪಡಿಸುವ ಕೆಲಸದಲ್ಲಿ ತೊಡಗಿದ್ದೇವೆ' ಎಂದರು.

ಕೆರೆಗೂ ಸಾಲ ಪಡೆದರು

ಬೆಂಗಳೂರು: ಮನೆಗೆ, ಸ್ಕೂಟರಿಗೆ, ಟೀವಿಗೆ ಸಾಲ ಪಡೆಯುವುದನ್ನು ಕೇಳಿದ್ದೀರಿ, ಕೃಷಿಗೆ ಸಾಲ ನೀಡುವುದನ್ನೂ ಕೇಳಿಯೇ ಇರುತ್ತೀರಿ. ಆದರೆ, ಕೆರೆಗೆ ಸಾಲ ಪಡೆಯುವುದನ್ನು...?

ಇಂಥದೊಂದು ಸಾಲ ಪಡೆಯುವ ಮೂಲಕ ರಾಷ್ಟ್ರದ ಗ್ರಾಮಾಭಿವೃದ್ಧಿ ನಕಾಶೆಯಲ್ಲಿ ಪ್ರಪ್ರಥಮವಾಗಿ ದಾಖಲಾಗಿರುವುದು ಭೀಮನತ್ತ ಗ್ರಾಮ.

ಈ ಗ್ರಾಮದಲ್ಲಿ ಕೆಳಗಿನ ಕೆರೆಯ ದುರಸ್ತಿಗಾಗಿ ಕೆರೆಯ ಅಚ್ಚುಕಟ್ಟುದಾರರು ಮಲ್ಲನಾಯಕನಹಳ್ಳಿ ಗ್ರಾಮೀಣ ಬ್ಯಾಂಕಿನಿಂದ 5 ಲಕ್ಷ ರು. ಸಾಲ ಪಡೆದರು. ಅದನ್ನು ಸಂಘದ ಹೆಸರಿನಲ್ಲಿ ಪಡೆದರು. ಪ್ರತಿಯೊಬ್ಬ ಸದಸ್ಯರೂ ತಮ್ಮ ಕೂಲಿಯ ಅರ್ಧ ಭಾಗವನ್ನು ನೀಡುವ ಮೂಲಕ ಸಾಲ ಪಾವತಿಸುತ್ತಿದ್ದಾರೆ!

'ಈ ಕೆರೆಯನ್ನೇನೋ ಸಾಲ ಪಡೆದು ದುರಸ್ತಿ ಮಾಡಿದೆವು. ಆದರೆ, ಸತತವಾಗಿ ಮೂರ್‍ನಾಲ್ಕು ವರ್ಷಗಳಿಂದ ಮಳೆಯೇ ಬಂದಿಲ್ಲ. ಹೀಗಾಗಿ ಕೆರೆಯಲ್ಲಿ ನೀರೂ ಇಲ್ಲ, ಬೆಳೆಯೂ ಬಂದಿಲ್ಲ. ಹೀಗಾಗಿ ಮರು ಪಾವತಿ ಸಮಸ್ಯೆಯಾಗಿದೆ. ಇನ್ನೂ 70 ಸಾವಿರ ರು. ಅಸಲು ಹಾಗೂ ಬಡ್ಡಿ ತೀರಿಸಬೇಕಾಗಿದೆ' ಎಂದು ಸೌದಾಮಣಿಯಮ್ಮ ವಿವರಿಸುತ್ತಾರೆ.

ಈ ಸಾಲವನ್ನು ಪಾವತಿಸಲು ಕೆರೆ ಕೂಲಿಗೆ ಹೋಗುವ ಸದಸ್ಯ ಕುಟುಂಬಗಳು ತಮ್ಮ ಕೂಲಿಯಲ್ಲಿನ ಅರ್ಧದಷ್ಟು ಭಾಗವನ್ನು ನೀಡುತ್ತವೆ. ಇನ್ನೂ ಹಲವರು ಪ್ರತಿ ದಿನ ಸೊಸೈಟಿಗೆ ಹಾಲು ಹಾಕಿದಾಗ ದೊರೆಯುವ ಹಣದಲ್ಲಿನ ಅರ್ಧಭಾಗವನ್ನು ನೀಡುತ್ತಿವೆ!'

■ **ಕೆರೆಯಷ್ಟೇ ಅಲ್ಲ...:** ಬರೀ ಕೆರೆ ನಿರ್ವಹಣೆಯಲ್ಲಷ್ಟೇ ಅಲ್ಲ, ಇತರ ಗ್ರಾಮಾಭಿವೃದ್ಧಿ ಕಾರ್ಯದಲ್ಲಿಯೂ ಸ್ವ ಸಹಾಯ ಸಮಿತಿಗಳು ತೊಡಗಿಕೊಂಡಿವೆ. ಈ ಗ್ರಾಮದಲ್ಲಿನ ಹಾಲು ಉತ್ಪಾದಕರ ಮಹಿಳಾ ಸಂಘವನ್ನು ನಿರ್ವಹಿಸುವುದೂ ಈ ಸ್ವಸಹಾಯ ಸಮಿತಿಯೇ.

'ಈ ಹಾಲು ಉತ್ಪಾದಕರ ಸಂಘ ಕಳೆದ ಮೂರ್‍ನಾಲ್ಕು ವರ್ಷಗಳ ಹಿಂದೆ ಆರಂಭವಾಗಿತ್ತು. ಆಗ ಹಣದ ಅವ್ಯವಹಾರ ನಡೆದಿದ್ದರಿಂದ ಕೆಲ ಸಂಘ ಮುಚ್ಚಿತ್ತು. ಈಗ ಅದನ್ನು ಸ್ವಸಹಾಯ ಸಂಘವೇ ವಹಿಸಿಕೊಂಡಿದೆ. ಈಗ ಪರಿಸ್ಥಿತಿ ಸುಧಾರಿಸಿದೆ. ಪ್ರತಿದಿನ ಸುಮಾರು 250 ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಇದಲ್ಲದೇ ಉಳಿತಾಯ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದೆ. ಇದು ಕಳೆದ ಆರೆಂಟು ವರ್ಷದಿಂದ ಜಾರಿಯಲ್ಲಿದೆ. ಸಂಘದ ಪ್ರತಿಯೊಬ್ಬ ಮಹಿಳೆಯೂ ವಾರಕ್ಕೆ 10 ರಿಂದ 20 ರು. ಉಳಿತಾಯ ಮಾಡುವುದು ಕಡ್ಡಾಯ. ಈಗಾಗಲೇ ಸುಮಾರು 70 ಸಾವಿರಕ್ಕೂ ಹೆಚ್ಚು ರುಪಾಯಿ ಈ ಸಂಘದ ಸಂಗ್ರಹದಲ್ಲಿದೆ' ಎಂದು ಗ್ರಾಮವಿಕಾಸ ಸರ್ಕಾರೇತರ ಸಂಘಟನೆಯ ಸ್ವಯಂ ಸೇವಕಿ ಮಂಜುಳಾ ವಿವರಿಸಿದರು.

'ಇದಲ್ಲದೇ, ಬಾಲವಾಡಿ, ಮಕ್ಕಳಿಗೆ ಸ್ನೇಹ ಕೂಟ, ಆರೋಗ್ಯ ತಪಾಸಣೆ ಹಾಗೂ ರಾತ್ರಿ ಶಾಲೆಗಳನ್ನೂ ಮಹಿಳೆಯರೇ ನಡೆಸುತ್ತಿದ್ದಾರೆ. ಈಗ ಗ್ರಾಮದಲ್ಲಿ ಏನೇ ಆಗಬೇಕು ಎಂದರೂ ಪುರುಷರೂ ಮಹಿಳೆಯರತ್ತಲೇ ನೋಡಬೇಕಾದ ಅನಿವಾರ್ಯ ಸ್ಥಿತಿ ಉಂಟಾಗಿದೆ' ಎಂದು ಭೀಮನತ್ತ ಗ್ರಾಮದ ರಾಮಣ್ಣ ಹೇಳುತ್ತಾರೆ.

'ಗ್ರಾಮದ ಸಮಸ್ಯೆಗಳನ್ನು ಬಗೆ ಹರಿಸುವುದರಲ್ಲಿಯೂ ಮಹಿಳೆಯರೇ ಪ್ರಮುಖ ಪಾತ್ರ ವಹಿಸುತ್ತಾರೆ. ಇಟೀಚೆಗೆ ಗ್ರಾಮದಲ್ಲಿ ಕುಡಿಯುವ ನೀರಿನ ಕೊಳವೆ ಬಾವಿ ಕೆಟ್ಟು ಹೋದಾಗ, ಮುಳಬಾಗಿಲಿನಲ್ಲಿರುವ ಕುಡಿಯುವ ನೀರಿನ ಕಚೇರಿಗಳ ಮುಂದೆ ಮಹಿಳೆಯರು ವಿಶೇಷ ಕಾರ್ಯಾಚರಣೆ ನಡೆಸಿದರು. ಅಂದಿನಿಂದ ಈ ಗ್ರಾಮದ ಮಹಿಳೆಯರು ಏನೇ ಸಮಸ್ಯೆ ಹೇಳಿಕೊಂಡು ಹೋದರೂ ತಕ್ಷಣವೇ ಪರಿಹಾರ ದೊರಕುತ್ತದೆ' ಎಂದು ಅವರು ಸಮಾಧಾನದ ನಿಟ್ಟುಸಿರು ಬಿಡುತ್ತಾರೆ.

ಕೋಲಾರ: ಮಹಿಳೆಯರಿಂದಲೇ 18 ಕೆರೆಗಳ ಹೂಳು ಸ್ವಚ್ಛ

ಕೋಲಾರ, ಜ. 17: ಗ್ರಾಮಗಳ ಸಮಗ್ರ ಅಭಿವೃದ್ಧಿ ಧ್ಯೇಯದೊಂದಿಗೆ ಕಳೆದ 20 ವರ್ಷಗಳಿಂದ ಕೆಲಸ ಮಾಡುತ್ತಾ ಬಂದಿರುವ ಜಿಲ್ಲೆಯ ಗ್ರಾಮ ವಿಕಾಸ ಸಂಸ್ಥೆಯು ಸದ್ದಿಲ್ಲದೆ ಕೇವಲ ಮಹಿಳೆಯರಿಂದಲೇ 18 ಕೆರೆಗಳ ಹೂಳು ತೆಗೆಸಿ ಸ್ವಯಂ ಸೇವಾ ಸಂಸ್ಥೆಯು ಮನಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದೆಂಬುದನ್ನು ತೋರಿಸಿ ಕೊಟ್ಟಿದೆ.

ಮುಳಬಾಗಿಲು ತಾಲೂಕಿನ 129 ಹಾಗೂ ಕೋಲಾರ, ಬಂಗಾರಪೇಟೆ ತಾಲೂಕುಗಳ 12 ಗ್ರಾಮಗಳಲ್ಲಿ ಕೆಲಸ ನಿರ್ವಹಿಸುತ್ತಾ ಬಂದಿರುವ ಗ್ರಾಮ ವಿಕಾಸವು ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವ ಮೂಲಕ ಅವರನ್ನು ಸಶಕ್ತರನ್ನಾಗಿ ಮಾಡಿ ಅವರ ಕುಟುಂಬಗಳಲ್ಲಿ ಆಹಾರ ಭದ್ರತೆ ಉಂಟು ಮಾಡುವ ಉದ್ದೇಶದಿಂದ ಕಳೆದ 20 ವರ್ಷಗಳ ಹಿಂದೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲೂಕಿನ ಹೊನ್ನಶೆಟ್ಟಿಹಳ್ಳಿಯಿಂದ ಕೆಲಸ ಪ್ರಾರಂಭಿಸಿತು.

ಅಂದಿನಿಂದ ಇಂದಿನವರೆವಿಗೂ ಸುಮಾರು 140 ಗ್ರಾಮಗಳಲ್ಲಿ 6500 ಕುಟುಂಬಗಳ 5300 ಬಡ ಮಹಿಳೆಯರು, 2200 ಬಡ ಮಕ್ಕಳ ಅಭಿವೃದ್ಧಿಯಲ್ಲಿ ಪಾಲ್ಗೊಂಡಿದ್ದು, ಈ ಪೈಕಿ ಶೇ.60 ರಷ್ಟು ಪರಿಶಿಷ್ಟ ಜಾತಿ ಪಂಗಡಗಳಿಗೆ ಸೇರಿವೆ. ಯಾವುದೇ ನದಿ ನಾಲೆಗಳಿಲ್ಲದಿದ್ದರೂ ಸಂಪೂರ್ಣ ಕೃಷಿಯಾಧರಿತ ಪ್ರದೇಶವಾಗಿರವ ಕೋಲಾರ ಜಿಲ್ಲೆಯಲ್ಲಿ ಕೆರೆಗಳೇ ಕೃಷಿಗೆ ಆಧಾರ. ಆದರೆ ಕೆರೆಗಳು ಹೂಳು ತುಂಬಿಕೊಂಡಿರು ವುದರಿಂದ ನೀರಿನ ಸಂಗ್ರಹಣೆ ಪ್ರಮಾಣ ಕಡಿಮೆಯಾಗಿ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆಗಳು ಕುಂಠಿತಗೊಳ್ಳುತ್ತಿರುವುದನ್ನು ಗಮನಿಸಿದ ಗ್ರಾಮ ವಿಕಾಸ್ ಕೆರೆ ಹೂಳೆತ್ತುವ ಕಾಮಗಾರಿ ಕೈಗೆತ್ತಿ ಕೊಳ್ಳಲು ಮುಂದಾಯಿತು.

ಸರಕಾರದ ನೆರವಿಲ್ಲದೆ, ಕೇವಲ ಗ್ರಾಮೀಣ ಮಹಿಳೆಯರ ಮಾನವ ಶಕ್ತಿಯಿಂದಲೇ ಕೆರೆಗಳ ಹೂಳು ತೆಗೆಯುವ ಕಾಮಗಾರಿ ಪ್ರಾರಂಭಿಸಿದರೆ, ಮಹಿಳಾ ಕೆಲಸದಾಳುಗಳಿಗೆ ಕೂಲಿ ಕೆಲಸ ಸಿಗುವ ಜೊತೆಗೆ ಕೆರೆಗಳಲ್ಲಿ ನೀರು ಶೇಖರಣಾ ಪ್ರಮಾಣ ಹೆಚ್ಚಾಗಿ ಗ್ರಾಮಗಳ ಅಭಿವೃದ್ಧಿ ಸಾಧ್ಯವೆಂದು ಅರಿತ ಗ್ರಾಮವಿಕಾಸ ಸಂಸ್ಥೆಯು ಕೆರೆಗಳಲ್ಲಿ ತುಂಬಿಕೊಂಡಿದ್ದ ಹೂಳನ್ನು ಮಹಿಳಾ ಸ್ವಸಹಾಯ ಸಂಘಗಳು ಮತ್ತು ನಬಾರ್ಡ್ ಬ್ಯಾಂಕಿನ ಸಾಲದ ಹಣದಲ್ಲಿ ಕೈಗೆತ್ತಿಕೊಳ್ಳಲು ನಿರ್ಧರಿಸಿ ಕೆಲಸ ಪ್ರಾರಂಭಿಸಿತು.



ಕೋಲಾರ ಜಿಲ್ಲೆ ಗ್ರಾಮ ವಿಕಾಸ ಸಂಸ್ಥೆಯು ಮಹಿಳಾ ಸಂಘಗಳ ನೆರವಿನಿಂದ ಮುಳಬಾಗಿಲು ತಾಲೂಕಿನ 18 ಕೆರೆಗಳಲ್ಲಿ ಸುಮಾರು 70 ಲಕ್ಷ ವೆಚ್ಚಮಾಡಿ ಕೆರೆ ಹೂಳೆತ್ತುವ ಕಾಮಗಾರಿಗಳನ್ನು ಪೂರೈಸಿದೆ.

ಮುಳಬಾಗಿಲು ತಾಲೂಕಿನಲ್ಲಿ ಸುಮಾರು 400 ಕೆರೆಗಳಿದ್ದು, ಈ ಪೈಕಿ ಹೊನ್ನಶೆಟ್ಟಿಹಳ್ಳಿ, ಭೀಮನೆತ್ರ, ದೊಡ್ಡಗಾನಹಳ್ಳಿ, ಕೀಲುಹೊಳಲಿ, ಮಿಣಜೇನಹಳ್ಳಿ, ಹೊಸಕೆರೆಹಳ್ಳಿ, ಪಿಚ್ಚಗುಂಟಹಳ್ಳಿ ಸೇರಿದಂತೆ 18 ಕೆರೆಗಳ ಹೂಳನ್ನು ಸುಮಾರು 70 ಲಕ್ಷ ರೂಪಾಯಿ ವೆಚ್ಚದಲ್ಲಿ ಸಾವಿರಾರು ಮಂದಿ ಮಹಿಳೆಯರಿಗೆ ಉದ್ಯೋಗ ಸೃಜಿಸುವ ಮೂಲಕ ನಿರ್ವಹಿಸಲಾಗಿದೆ. ಪ್ರತಿ ಕೆರೆ ಹೂಳೆತ್ತುವ ಸಲುವಾಗಿ ಪ್ರತಿ ಗ್ರಾಮದಿಂದ 70 ಕುಟುಂಬಗಳ ನೂರಾರು ಮಂದಿ ಹೂಳೆತ್ತುವ ಕಾಮಗಾರಿಯಲ್ಲಿ ತೊಡಗಿದ್ದು, ಪ್ರತಿ ಕೆರೆ ಹೂಳೆತ್ತಲು ಸರಾಸರಿ 4 ಲಕ್ಷ ರೂಪಾಯಿ ವೆಚ್ಚವಾಗಿದೆ.

ಕೆರೆಗಳಲ್ಲಿ ಹೂಳೆತ್ತಿರುವುದರಿಂದ ಮಳೆಗಳಲ್ಲಿ ನೀರು ಹೆಚ್ಚಾಗಿ ಶೇಖರಣೆಗೊಂಡಿರುವುದರಿಂದ ಗ್ರಾಮಸ್ಥರು ಎರಡು ಬೆಳೆ ತೆಗೆಯಬಹುದಾಗಿದೆ. ಮೀನುಗಾರಿಕೆಗೆ ಚಾಲನೆ ದೊರೆಯುತ್ತಿದೆ, ಅಂತರ್ಜಲ ಮಟ್ಟ ಅಭಿವೃದ್ಧಿ ಗೊಳ್ಳುತ್ತಿದೆ, ಕೊಳವೆ ಬಾವಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಾಗಿದೆ. ಬಿತ್ತನೆ ಕೊಯ್ಲು ಮಾಡುವ ಸಂದರ್ಭದಲ್ಲಿ ಗ್ರಾಮೀಣ ಮಹಿಳೆಯರು ಹೆಚ್ಚಾಗಿ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಿವೆ.

ಈ ಗ್ರಾಮದ ಕೆರೆಗಳಲ್ಲಿ ಹೂಳು ತೆಗೆಯುವ ಕಾರ್ಯಕ್ಕಾಗಿ ಗ್ರಾಮೀಣ ಸ್ವಸಹಾಯ ಮಹಿಳಾ ಗುಂಪುಗಳು ಬ್ಯಾಂಕ್‌ನಲ್ಲಿ ಸಾಲ ಪಡೆದಿದ್ದು ಕೆರೆಯಲ್ಲಿ ಇತ್ತೀಚೆಗೆ ಬಿದ್ದ ಮಳೆ ನೀರಿನಿಂದಾಗಿ ತೆಗೆದ ಬೆಳೆಯಿಂದ ಸಾಲವನ್ನು ತೀರಿಸಲಾಗಿದೆ.

ಒಟ್ಟಾರೆ ಗ್ರಾಮ ವಿಕಾಸ ಸ್ವಯಂ ಸೇವಾ ಸಂಸ್ಥೆಯು ಮಹಿಳಾ ಸಂಘಗಳನ್ನು ಭಾಗಿಯಾಗಿಸುವ ಮೂಲಕ ಗ್ರಾಮೀಣಾಭಿವೃದ್ಧಿಗೆ ಚಾಲನೆ ನೀಡಿದೆ. ಇದೇ ರೀತಿ ಎಲ್ಲಾ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸಿದರೆ ಸರಕಾರದ ನೆರವಿಲ್ಲದೆ ಗ್ರಾಮೀಣಾಭಿವೃದ್ಧಿ ಏಕೆ ಸಾಧ್ಯವಾಗುತ್ತಿಲ್ಲವೆಂಬುದನ್ನು ಗ್ರಾಮವಿಕಾಸ ಸಂಸ್ಥೆಯು ಸಾಧಿಸಿ ತೋರಿಸಿದೆ.

ಉದಯವಾಣಿ ಜನವರಿ 18, 2003

▶Obituary, P 9

Papamma was merciless. Why the urban bias? Why not restore the bus service to our village, she asked Venkatappa

38-yr-old grandmom's questions leave Speaker speechless

By Max Martin

Honnasettahally (Kolar), April 9: It was an unsuspecting politician's usual speech to his constituency. Just that Vidhan Sabha Speaker M V Venkatappa made his promises a bit too grandiose and was a wee bit careless.


The occasion — a meet organised by the Grameen Mahila Okkuta (Village Women's Federation) here on Sunday to accept a few grain storage bins subsidised by the Union Ministries of Food as well as Steel.

In brief, Venkatappa promised water. He waxed eloquent on the Government's ambition to lift water from the west-flowing rivers, pump it up the Western Ghats and then let it cascade down the tanks in his constituency, Mulabagal, and elsewhere in arid eastern Karnataka.

Venkatappa did a sophisticated face-saving trick. "I have not seen such an empowered woman in this district or anywhere else," he admitted

It was well past lunch time. The Okkuta women of 265 self-help groups from scores of villages, clad in shiny saris of their group's colour, were getting restless. But not Papamma, 38, a grandmother from Minijenahally village, 5 km away.

"Sir", she said, getting up. "For your grand plan to work, the tanks have to hold water. But they are all silted up. We have been demanding that they be restored for years."



If the village tanks hold enough water, then the villagers will not need water from across the Ghats, after all.

Papamma ruthlessly picked more holes in the Speaker's speech. He had suggested that tanks nearer the town and cities be restored first, so that people get drinking water. "Why this urban bias always? What about us?"

Then the Speaker's idea of pumping water came under attack. "Where is the electricity?" Papamma comes from a village where electricity is an occasional phenomenon. As there was no cold storage nearby, farmers sold tomatoes dirt cheap – Rs 3.50 for a 15 kg basket – during last year's glut. Some ploughed tomatoes back into their fields.

The audience, stunned at first by Papamma's assault, could barely control their applause. The Speaker was left speechless.

Immediately regaining his composure, Venkatappa did a sophisticated face-saving trick. "I have not seen such an empowered woman in this district or anywhere else," he admitted. He offered more platitudes and praises.



Women carrying grain storage bins that were distributed as part of the Central 'save gain programme' in Honnasettahally. (Inset) The powerful grandmother, Papamma, who caught the Speaker off guard.— Express photo

Papamma has been an active worker of the Okkuta that helps women save money, get farming tips and voice the concerns of their communities. A widow, she is now its secretary with a monthly salary of Rs 1,700. Papamma's short speech from the dais was spirited, focussed and somewhat guileless. She displayed this trait earlier in the day too when, visiting her village, Venkatappa had wondered how she commuted to Honnasettahally. Obviously she walked all the 5 kilometers.

The Speaker offered her half the money for a moped. She refused the offer point blank.

▶to P 9

38-yr-old grandmom...

▶from P 1

"What about running a bus service to the village?" It has been a long pending demand. Now an inadvertent snub to the Speaker.

There was a bus which used to ply, it stopped a few years ago as the roads were bad. About 40 girls from the village walk 6 km every day to attend high school. Papamma's two daughters are matriculates, the elder one a mother now.

The Speaker's visit to Minijenahally itself was part of a continuing drama. He was there to inaugurate the restoration of the village tank, which the local people initiated with Rs 62,000 they had collected and Rs 2.5 lakh offered by Grama Vikas, a non-gover[nme]ntal organisation that s[uppo]rts the Okkuta.

The Zilla Panchayat (ZP) pledged Rs 2.5 lakh last w[eek] after the women blocke[d the] door of the ZP office till [late] one night. This money ha[d] to come. It would have [been] difficult for Venkatappa t[o for]get Papamma, for she spe[arhe]aded the women's strugg[le for] water supply to the villag[e dur]ing his earlier tenure as a [legis]lator (1989-94). Well, he o[ffered] just a handpump, til[l] tempo-loads of w[omen] blocked the Public Health [Eng]ineering office and later [cha]nged his office. The v[illage] women are now fine-t[uning] their power play skills.

NECON

DIVERSIFIED JUTE PRODUCTS

N.C.J.D.

Your business
Your success.
Your future
Our support.

Calling all NGOs, Weavers, Crafts persons, Entrepreneurs and Individuals who wish to profit from the growing India wide, worldwide popularity of an everexpanding range of diversified jute products. From carpets and fashion garments to handicrafts and home furnishing.

Get all the support you need.
Where and when you need

1. **Jute service Centre** Interacts with you at field level, meets local demand.
2. **Raw Material Bank** For assured supply of Jute and Jute-blended Yarn, raw materials, at Mill Gate Prices.
3. **Market Support** Marketing assistance, exhibition exposure.
4. **Design Development** Skills, artistic talent, innovativeness, handsomely rewarded.
5. **Jute Entrepreneurs Assistance Scheme** Interest-free loans with 1 year moratorium.
6. **Support For NGOs** Upto Rs. 2 Lakhs per year as matching grand-in-aid

For more details please write to :-

❑ **National Centre for Jute Diversification**
Govt. of India, Ministry of Textile,
ICMARD Building, 8th Floor, CIT Scheme VIII (M)
Block 14, Ultadanga, Calcutta - 700067
Phone - 033-356-3269/3373/9815,
Fax - 033 - 356 - 1270

❑ **Jute Service Centre,**
C/o. North Eastern Industrial Consultants Ltd.
Hospital Road,
Silchar-788001, Cachar, Assam
Phone - (03842) 47416

❑ **Jute Service Centre,**
C/o North Eastern Industrial Consultants Limited,
Rathor Bhawan, (2nd Floor) Palace Compound,
North Gate, Agartala - 799001, Tripura.
Ph./ Fax - (0381) 224792/ 208664

❑ 'NECON'
Opposite ABC India Ltd.,
Thangmeiband Polem Leikai
Imphal- 795001, Manipur

You've got questions. We've got answers.

NECON

A variance from the conventional jute manufactured products, jute diversification envisages to put jute into multiple application.

NCJD is the National body set by the Ministry of Textile, Government of India, for exploration, dissemination and application of Jute in diversified use.

NCJD seeks to create and promote enterprises, from tiny to large, organised or decentralised, but enthusiastic, for activities in Jute diversification. Finding of Research Laboratories are routed to commercial use from this Centre. The Centre also extends the support services to sustain the growth of enterprises, application of jute and also ensures scope for employment generation through entrepreneur development.

- Jute is natural •
- It is appreciated the world over that •
- Jute is harmony with the nature's desire.
- Jute is annually renewable, thus, could be put to unending diversified uses.
- Jute use can also assure the farmers fetch a value for their yield.

NCJD has embarked on several activity programmes around the country which includes operating of Raw Material Banks, Jute Service Centres, extending Marketing Support Facilities for the beneficiaries and financial assistance & support to entrepreneurs and NGOs. The Centre also explores to excavate newer designs through it's Design Development Scheme & Freelance Designer Scheme with a view to creating the much deserved demand for jute diversified products. This apart, NCJD also conduct various awareness programmes by way of holding workshops, seminars and rural training programmes and carried out publicity programmes aimed towards greater involvement of all segments of entrepreneurs and NGOs.

Diversified Application of Jute Fibre:

YARN PRODUCTION:

Jute yarn could be spun to varying quality each having its unique application and are very much in demand all over the country. Jute yarn could be even at a small scale - • Hand Spun or M/c Jute Yarn Manufacturing. • Jute/viscose or jute/ shoddy/ wool/ poly propylene/ other natural and synthetic fibres [compatible with jute] blended yarn in Jute System of Spinning. Jute/ Cotton Blended Yarn in Cotton System of Spg. • Jute/ Wool, Jute/ Acrylic, Jute/ Shoody yarn in Semi Worsted System of Spinning. • Jute Blended Yarn in Ring Spinning System. • Jute Blended Yarn in Friction Spinning System (like DREF) & Open-End Spinning System (Rotor) • Processing of Jute in Modified Cotton System of Spinning.

HAND LOOM

- 100% Jute & blended woven fabrics.
- Jute/Cotton, Jute/ Viscose, Jute/ Acrylic.
- Jute/ Shoody Wool etc. Union/ Blended fabrics
- Hand loom for use of Jute in Dobby & Jacquard.

POWER LOOM

- Jute in Power loom for union fabrics (shuttle & shuttleless)
- Warping & Sizing of Jute Yarn
- Weaving of Jute/PP/Acrylic/ Woollen Blanket.

MADE UPS

Manufacturing Process of Shopping Bags, Carry Bags, Soft Luggages, Decorative items, files, office utility items, gift and ornament, toys etc. and also garments.

HANDICRAFT ITEMS

Jute handicraft items could be anything that ones imagination could mould. From braided products made out of only Jute Fibre or with a mix of Plaster of Paris/ Cement, colourful and attractive composite interior decoration products could be crafted. Gift items & toys are very well known fast selling eye catching items made of Jute fibre.

LAMINATION/ COMPOSITE

Laminated fabrics are used for shopping, carry bags, soft luggage. Lamination could be processed in a tiny lamination unit. A unit for lamination of full size Fabric & Composite could be adopted or cottage sector composite with fibre, yarn, fabrics & rasin, plant could be set up. Even a Jute Composite Unit/Jute Particle Board Unit could fall under Small/ Medium Scale.

This apart Jute could even be used for preparation of jute based paper pulp & hand made paper, Jute based utility decorative items, could be bleaced & dyed using natural/ veg. dyes and printed & finished at a cottage & small scale level. Woollenised Jute Based Knitted Items have always found a good market. Jute Non-woven in medium & small sector could cater to diversified industrial & consumer use.

DIVERSIFIED JUTE PRODUCTS

Your business
Your success.
Your future
Our support.

N.C.J.D.

Calling all NGOs, Weavers, Crafts persons, Entrepreneurs and Individuals who wish to profit from the growing India wide, worldwide popularity of an everexpanding range of diversified jute products. From carpets and fashion garments to handicrafts and home furnishing.

Get all the support you need.
Where and when you need

1 **Jute service Centre**
Interacts with you at field level, meets local demand.

2 **Raw Material Bank**
For assured supply of Jute and Jute-blended Yarn, raw materials, at Mill Gate Prices.

3 **Market Support**
Marketing assistance, exhibition exposure.

4 **Design Development**
Skills, artistic talent, innovativeness, handsomely rewarded.

5 **Jute Entrepreneurs**
Assistance Scheme
Interest-free loans with 1 year moratorium.

6 **Support For NGOs**
Upto Rs. 2 Lakhs per year as matching grand-in-aid

For more details please write to :-

❑ **National Centre for Jute Diversification**
Govt. of India, Ministry of Textile,
ICMARD Building, 8th Floor, CIT Scheme VIII (M)
Block 14, Ultadanga, Calcutta - 700067
Phone - 033-356-3269/3373/9815,
Fax - 033 - 356 - 1270

❑ **Jute Service Centre,**
C/o. North Eastern Industrial Consultants Ltd
Hospital Road,
Silchar-788001, Cachar, Assam
Phone - (03842) 47416

❑ **Jute Service Centre,**
C/o North Eastern Industrial Consultants Limited,
Rathor Bhawan, (2nd Floor) Palace Compound,
North Gate, Agartala - 799001, Tripura.
Ph./ Fax - (0381) 224792/ 208664

❑ 'NECON'
Opposite ABC India Ltd.,
Thangmeiband Polem Leikai
Imphal- 795001, Manipur.

You've got questions. We've got answers.

A variance from the conventional jute manufactured products, jute diversification envisages to put jute into multiple application.

NCJD is the National body set by the Ministry of Textile, Government of India, for exploration, dissemination and application of Jute in diversified use.

NCJD seeks to create and promote enterprises, from tiny to large, organised or decentralised, but enthusiastic, for activities in Jute diversification. Finding of Research Laboratories are routed to commercial use from this Centre. The Centre also extends the support services to sustain the growth of enterprises, application of jute and also ensures scope for employment generation through entrepreneur development.

- Jute is natural •
- It is appreciated the world over that •
- Jute is harmony with the nature's desire.
- Jute is annually renewable, thus, could be put to unending diversified uses.
- Jute use can also assure the farmers fetch a value for their yield.

NCJD has embarked on several activity programmes around the country which includes operating of Raw Material Banks, Jute Service Centres, extending Marketing Support Facilities for the beneficiaries and financial assistance & support to entrepreneurs and NGOs. The Centre also explores to excavate newer designs through it's Design Development Scheme & Freelance Designer Scheme with a view to creating the much deserved demand for jute diversified products. This apart, NCJD also conduct various awareness programmes by way of holding workshops, seminars and rural training programmes and carried out publicity programmes aimed towards greater involvement of all segments of entrepreneurs and NGOs.

Diversified Application of Jute Fibre:

YARN PRODUCTION:

Jute yarn could be spun to varying quality each having its unique application and are very much in demand all over the country. Jute yarn could be even at a small scale - • Hand Spun or M/c Jute Yarn Manufacturing. • Jute/viscose or jute/ shoddy/ wool/ poly propylene/ other natural and synthetic fibres [compatible with jute] blended yarn in Jute System of Spinning. Jute/ Cotton Blended Yarn in Cotton System of Spg. • Jute/ Wool, Jute/ Acrylic, Jute/ Shoody yarn in Semi Worsted System of Spinning. • Jute Blended Yarn in Ring Spinning System. • Jute Blended Yarn in Friction Spinning System (like DREF) & Open-End Spinning System (Rotor) • Processing of Jute in Modified Cotton System of Spinning.

HAND LOOM

- 100% Jute & blended woven fabrics.
- Jute/Cotton, Jute/ Viscose, Jute/ Acrylic.
- Jute/ Shoody Wool etc. Union/ Blended fabrics.
- Hand loom for use of Jute in Dobby & Jacquard.

POWER LOOM

- Jute in Power loom for union fabrics (shuttle & shuttleless)
- Warping & Sizing of Jute Yarn
- Weaving of Jute/PP/Acrylic/ Woollen Blanket

MADE UPS

Manufacturing Process of Shopping Bags, Carry Bags, Soft Luggages, Decorative items, files, office utility items, gift and ornament, toys etc. and also garments.

HANDICRAFT ITEMS

Jute handicraft items could be anything that ones imagination **could mould**. From braided products made out of only Jute Fibre or with **a mix of Plaster of** Paris/ Cement, colourful and attractive composite interior **decoration products** could be crafted. Gift items & toys are very well known **fast selling eye catching** items made of Jute fibre.

LAMINATION/ COMPOSITE

Laminated fabrics are used for shopping, carry bags, **soft luggage**. **Lamination** could be processed in a tiny lamination unit. A unit for **lamination of full size** Fabric & Composite could be adopted or cottage sector **composite with fibre**, yarn, fabrics & rasin, plant could be set up. Even a Jute Composite Unit/Jute Particle Board Unit could fall under Small/ Medium Scale.

OOOOO

This apart Jute could even be used for preparation of jute based paper pulp & hand made paper, Jute based utility decorative items, could be bleaced & dyed using natural/ veg. dyes and printed & finished at a cottage & small scale level. Woollenised Jute Based Knitted Items have always found a good market. Jute Non-woven in medium & small sector could cater to diversified industrial & consumer use.